## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ವಿವಾದ: 04:2015-16 ದಿ: 20-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
| --- | --- |
| ಚಿದಾನಂದ ಗೌಡ ತಂದೆ: ವೀರಭದ್ರಗೌಡ | ರತ್ನಮ್ಮ ಗಂಡ: ರಾವಿಹಾಳು ಈರಪ್ಪ |
| ಬಿ.ಎಂ.ಸೂಗೂರು ಗ್ರಾಮ | ಕೆ. ಬೆಳಗಲ್ಲು ಗ್ರಾಮ |
| ಸಿರುಗುಪ್ಪ ತಾಲೂಕ | ಸಿರುಗುಪ್ಪ ತಾಲೂಕ |

### ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
| --- | --- | --- | --- | --- |
| ಕಂಚಗಾರ ಬೆಳಗಲ್ ಗ್ರಾಮ | 263 B | 3-16 | H-127/ 2014-15 | 408/2014-15 |
| | 284 D/4 | 0-99 | | |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಕಂಚಗಾರ ಬೆಳಗಲ್** ಗ್ರಾಮದ ಸ.ನಂ. **263B** ವಿಸ್ತೀರ್ಣ 3-16 **284 D/4** **ವಿಸ್ತೀರ್ಣ 0-99ಎಕರೆ** ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ** ಚಿದಾನಂದಗೌಡ ತಂದೆ ವೀರಭದ್ರಗೌಡ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ರತ್ನಮ್ಮ ಗಂಡ: ರಾವಿಹಾಳು ಈರಪ್ಪ ಕೆ. ಬೆಳಗಲ್ ಗ್ರಾಮ** ಇವರು ದಿ: 17-7-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **18-12-2015, 8-1-2016, 29-1-2016, 11-3-2016, 18-3-2016, 2-4-2016, 15-4-2016, 29-4-2016 ಮತ್ತು 13-5-2016** ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ಶ್ರೀ ಚಿದಾನಂದ ಗೌಡ ತಂದೆ: ವೀರಭದ್ರಗೌಡ ಬಿ.ಎಂ.ಸೂಗೂರು ಗ್ರಾಮ, ಇವರು ಕೆ.ಬೆಳಗಲ್ ಗ್ರಾಮದ ಸ.ನಂ. **263B** ವಿಸ್ತೀರ್ಣ 3-16, **284D/4** ವಿಸ್ತೀರ್ಣ 0-99ಎಕರೆ ಜಮೀನು ಪೋತಿಪಟ್ಟ ಪ್ರಕಾರ ನನ್ನ ತಾಯಿಯ ದಿ:25-2-2105 ರಂದು ಮೃತಪಟ್ಟಿರುವುದರಿಂದ ನನ್ನ ಹೆಸರಿಗೆ ಜಮೀನು ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ್ದು ಅಕ್ಕಳಾದ ರತ್ನಮ್ಮ ಇವರು ದಿ: 17-7-2015 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರು ಪರಿಷ್ಕಾರ ಮಾಡಿದ ಪ್ರಕಾರ ತಕರಾರು ಅರ್ಜಿಯನ್ನು ಹಿಮದಕ್ಕೆ ಪಡೆಯಲು ಸಮ್ಮತಿಸಿರುತ್ತಾರೆ. ಆದುದರಿಂದ ನನ್ನ ಭೂಮಿಯನ್ನು ನನ್ನ ಹೆಸರಿನಲ್ಲಿ ಪಟ್ಟ ಬದಲಾವಣೆ ಮಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಶ್ರೀಮತಿ: ರತ್ನಮ್ಮ ಗಂಡ: ರಾವಿಹಾಳು ಈರಪ್ಪ ಲೇಟ್ ಕೆ.ಬೆಳಗಲ್ ಗ್ರಾಮ ಆದ ನಾನು ನನ್ನ ತಮ್ಮನಾದ ಚಿದಾನಂದ ಗೌಡ ತಂದೆ: ವೀರಭದ್ರಗೌಡ ಇವರು ಕೆ.ಬೆಳಗಲ್ ಗ್ರಾಮದ ಸ.ನಂ. **263B** ವಿಸ್ತೀರ್ಣ 3-16, **284D/4** ವಿಸ್ತೀರ್ಣ 0-99ಎಕರೆ ಜಮೀನು ನನ್ನತಾಯಿ ದಿ:25-2-2015ರಂದು ಮೃತರಾಗಿರುವುದರಿಂದ ಪೋತಿಪಟ್ಟ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಅರ್ಜಿಸಲ್ಲಿಸಿದ್ದು ದಿ:17-7-2015 ರಂದು ಪಿತ್ರಾರ್ಜಿತ ಆಸ್ತಿ ಆಗಿದ್ದು ಇದನ್ನು ಮುಟೇಷನ್ ಮಾಡಬಾರದು ಎಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ದೊಡ್ಡ ಮನುಷ್ಯರು ಪರಿಷ್ಕಾರ ಮಾಡಿದ್ದರಿಂದ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ನನ್ನ ತಮ್ಮ ಚಿದಾನಂದಗೌಡ ತಂದೆ: ವೀರಭದ್ರಗೌಡ ಇವರ ಹೆಸರಿಗೆ ಪೋತಿವಾರಸತ್ವ ಪ್ರಕಾರ ವರ್ಗಾವಣೆ ಮಾಡಬಹುದೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ. ಸಿರುಗುಪ್ಪ ತಾಲೂಕಿನ ಕೆ. ಬೆಳಗಲ್ ಗ್ರಾಮದ ಸ.ನಂ. ಸ.ನಂ. **263B** ವಿಸ್ತೀರ್ಣ 3-16, **284 D/4** ವಿಸ್ತೀರ್ಣ 0-99 ಎಕರೆ ಜಮೀನು ಪೋತಿವಾರಸತ್ವ ಪ್ರಕಾರ ಚಿದಾನಂದ ಗೌಡ ತಂದೆ: ವೀರಭದ್ರ ಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20-05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಚಿದಾನಂದಗೌಡ

ಉಪ ತಹಶೀಲ್ದಾರರು 20/5/16
ಕರೂರು

ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.

ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲೂಕು

20/5/16